# ಕನ್ನಡ ನಾಟಕಗಳಲ್ಲಿ ಪುರಾಣ ಪ್ರಜ್ಞೆಯ ಚಿತ್ರಣ.

**ಡಾ. ಎಂ. ಮಂಜಪ್ಪ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಎಂ.ಎಸ್.ಬಿ. ಕಲಾ ಮತ್ತು ವಾಣಿಜ್ಯ ಕಾಲೇಜು
ದಾವಣಗೆರೆ.

**Article Link: https://aksharasurya.com/2023/07/manjappa-m/**

ಭಾರತೀಯ ಸಂಪ್ರದಾಯದಲ್ಲಿ ರಾಮಾಯಣ ಮತ್ತು ಮಹಾಭಾರತ ಗ್ರಂಥಗಳು ಶ್ರೇಷ್ಠವಾದವುಗಳು. ಬೆಲೆಯಿಂದಲೂ, ಭದ್ರತೆಯಿಂದಲೂ ಉಳಿದಾವ ಆಸ್ತಿಗಿಂತ ಉತ್ಕೃಷ್ಟವಾದವು. ಸೃಷ್ಟಿಯ ಮೂಲಗಳನ್ನು, ದೇವಾದಿದೇವತೆಗಳನ್ನು ದೇವತಾ ಅವತಾರವನ್ನು ಕುರಿತ ಕಥೆಗಳು ಇಲ್ಲಿವೆ. ಮತೀಯ ಪ್ರಕ್ರಿಯೆಗಳು ಮತ್ತು ನಂಬಿಕೆಗಳು ಸಹ ಈ ಕಥೆಗಳಲ್ಲಿ ಬಳಕೆಯಾಗುತ್ತವೆ. ವೀರಕಥೆಗಳೇ ಕಾಲಾನುಕ್ರಮದಲ್ಲಿ ಪುರಾಣ ಕಥೆಗಳಾಗಿ ಪರಿಣಮಿಸುವುದುಂಟು. ಈ ಹಿನ್ನೆಲೆಯಲ್ಲಿ ಪುರಾಣ ಪರಂಪರೆಯನ್ನು ವೇದಗಳ ಕಾಲದಿಂದಲೂ ಗುರುತಿಸುವುದು ಸಾಧ್ಯವಾಗಿದೆ. ಒಂದು ದೃಷ್ಟಿಯಿಂದ ಮಾನವನಿಗೆ ಪುರಾಣಗಳು, ದೇವತೆಗಳು ಪ್ರಾಚೀನ ಕಥೆಗಳು ಮಾತ್ರವೇ ಆಗಿರಲಿಲ್ಲ. ಅವು ಅವರಿಗೆ ಆಧ್ಯಾತ್ಮಿಕ ವಿಷಯ ತಿಳಿಸುವ ಗುರುಗಳೂ ಆಗಿದ್ದವು. ತತ್ಪರಿಣಾಮವಾಗಿ ನೀತಿ, ನಡವಳಿಕೆ, ಘನತೆಯ ಬದುಕು, ಸಂಸ್ಕೃತಿ, ರಾಜಕೀಯ, ಸಾಮಾಜಿಕ ಮುಂತಾದ ಅಂಶಗಳನ್ನು ಬೋಧಿಸುವ ಆಕರಗಳಾಗಿದ್ದವು. ಈ ಕಾರಣದಿಂದ ಸಮಕಾಲೀನ ಬದುಕಿಗೂ ಪೂರಕವಾಗಿವೆ.

ಪುರಾಣಗಳು ಬದುಕಿನ ನಂಬಿಕೆಗಳನ್ನು ಆಧರಿಸಿ ಕಟ್ಟಿಕೊಟ್ಟ ಐತಿಹ್ಯದ ವಿವರಗಳು, ವಿಸ್ತೃತವಾಗಿ ಬೆಳೆಯುತ್ತ ಹೋಗಿವೆ. ಅಲ್ಲದೆ ಪುರಾಣಗಳು ನೆಲ-ಮುಗಿಲುಗಳ ಸಂಬಂಧವನ್ನು ಗ್ರಹಿಸುವ ಕ್ರಮದಲ್ಲಿ ಪೌರಾಣಿಕ ಪ್ರತಿಮೆಗಳಾಗುತ್ತವೆ. ಪುರಾಣಕಥೆಗಳು ಒಂದು ಸಂಸ್ಕೃತಿಯ ಪರಂಪರೆಯ ಪ್ರತಿಬಿಂಬದಂತೆ ಕಂಡು ಬರುತ್ತವೆ. ಜಗತ್ತಿನ ಸೃಷ್ಟಿ-ಲಯಕ್ಕೆ ಸಂಬಂಧಿಸಿದಂತೆ ಮಾತಾಡುತ್ತವೆ. ಪ್ರಕೃತಿಯಲ್ಲೂ ಕಂಡು ಬರುವ ಸಾವು, ಮರುಹುಟ್ಟಿಗೆ ಸಂಬಂಧಿಸಿದಂತೆ ಸಾಂಪ್ರದಾಯಿಕವಾಗಿವೆ. ರೂಢಿಯಲ್ಲಿರುವ ಧಾರ್ಮಿಕ ಆಚರಣೆಗಳ ವಿವರಣೆಯಂತೆ ಪುರಾಣ ಕಥೆಗಳಿರುತ್ತವೆ. ಆದುದರಿಂದ ಇವೆಲ್ಲವುಗಳನ್ನು ಬಳಸಿಕೊಂಡು ಆಧುನಿಕ ರಂಗಭೂಮಿಯೂ ಬೆಳೆಯತೊಡಗಿತು. ಅಲ್ಲದೆ "ಇತಿಹಾಸ ಪೂರ್ವಕಾಲದ

ಸಾಮುದಾಯಿಕ ನೆನಪುಗಳು ಪುರಾಣ ಕಥೆಗಳಾಗಿ ಘನಿಭವಿಸಿವೆ. ಒಂದು ಪರಂಪರೆಯು ಒಪ್ಪಿಕೊಂಡು ಬಂದ ನಂಬಿಕೆ, ಮೌಲ್ಯ ಮತ್ತು ಸಾಮಾಜಿಕ ಸಂಬಂಧಗಳ ಮೂಲಪ್ರತಿಯನ್ನು ಅವುಗಳಲ್ಲಿವೆ."[1] ಎಂಬ ಕೆ. ಮರುಳಸಿದ್ದಪ್ಪವರ ನುಡಿಗಳು ಸಕಾಲಿಕವಾಗಿವೆ.

'ಪ್ರಜ್ಞೆ' ಎಂಬ ಪದ ಭೂತ-ವರ್ತಮಾನ, ಭವಿಷ್ಯತ್ಕಾಲಗಳನ್ನೊಳಗೊಂಡು ಅವುಗಳನ್ನು ಒಂದು ಸರದಿಯಲ್ಲಿರಿಸಿ ಪರಿಸರದ ಸ್ಥಿತಿಯನ್ನು ಗ್ರಹಿಸಿ, ಆ ಸ್ಥಿತಿಗೆ ಚಾಲನೆ ನೀಡುವ ಒಂದು 'ಶಕ್ತಿ'. ಇದರಿಂದ ಪುರಾಣಗಳು ಸಾರ್ವತ್ರಿಕವಾಗಿ ಅವು ಎಲ್ಲಾ ಕಾಲ, ದೇಶದ ಅನುಭವವನ್ನು ಗರ್ಭೀಕರಿಸಿಕೊಂಡಿರುವುದರಿಂದ ಪೌರಾಣಿಕ ಪ್ರಜ್ಞೆಯು ಇಂದಿಗೂ ಜೀವಂತವಾಗಿದೆ. ಪುರಾಣಗಳು ಪ್ರಜ್ಞಾಪೂರ್ವಕ ನೆಲೆಯಲ್ಲಿ ಕಾಲದಿಂದ ಕಾಲಕ್ಕೆ ಧರ್ಮ-ಸಾಹಿತ್ಯಗಳ ಮೂಲಕ ಪ್ರಸಾರವಾಗಿ ಮುಂದುವರೆದಂತೆ ಸಮುದಾಯದ ಧಾರ್ಮಿಕ ವಿಧಿ, ಆಚರಣೆ, ನಂಬಿಕೆ, ಸಾಮಾಜಿಕ ಸಂಬಂಧಗಳ ಮೂಲಕ ವ್ಯಕ್ತಿಯ ಅನುಭವದ ವಲಯವನ್ನು ಪ್ರವೇಶಿಸುತ್ತವೆ. ಈ ಎರಡೂ ನೆಲೆಯಲ್ಲಿ ವ್ಯಕ್ತಿತ್ವವೊಂದು ರೂಪುಗೊಳ್ಳುತ್ತದೆ, ಆದುದರಿಂದ ಆಧುನಿಕ ವಿಚಾರವಾದಿಯೂ ಸಹ ಪರಂಪರೆಯ ಕೆಲವೊಂದು ನೆನಪು, ನಂಬಿಕೆ ಮತ್ತು ಸಾಮಾಜಿಕ ಸಂಬಂಧಗಳಿಗೆ ಬದ್ಧನಾಗಿರುತ್ತಾನೆ. ಹೀಗೆ ನಮ್ಮ ಅನುಭವದ ತಿರುಳೇ ಮುಂದೊಂದು ಕಾಲಕ್ಕೆ ಪುರಾಣಗಳಲ್ಲಿ ಸಾಂಕೇತಿಕವಾಗಿ ಮೂಡಿ ಬರುತ್ತದೆ. ತತ್ಪರಿಣಾಮವಾಗಿ ಅವು ನಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರಿರುವುದರಿಂದ ಆಧುನಿಕ ಕನ್ನಡ ನಾಟಕಗಳಲ್ಲಿ ಸಹ ಪುರಾಣ ಪ್ರಜ್ಞೆ ಹೇಗೆ ಪಡೆಮೂಡಿದೆ ಎಂದು ತಿಳಿಯಬಹುದಾಗಿದೆ. ಭಾರತೀಯ ನಾಟಕ ಸಾಹಿತ್ಯ ಇಲ್ಲಿನ ಪುರಾಣಗಳಿಂದಲೇ ಪ್ರೇರಣೆ, ಪ್ರಚೋದನೆ ಪಡೆದುಕೊಂಡಿದೆ. ಮೊದಲು ರಾಮಾಯಣ, ಮಹಾಭಾರತ ಮತ್ತು ಬೃಹತ್ಕಥೆಗಳು ನಾಟಕದ ಕಥಾವಸ್ತುಗಳಿಗೆ ಉಗಮಸ್ಥಾನವಾಗಿವೆ. ಇವುಗಳ ಜೊತೆಗೆ ಕಲ್ಪಿತ ಕಥೆಗಳು ಅಲ್ಲಲ್ಲಿ ಹೆಣೆದುಕೊಂಡರೂ ಅವುಗಳ ರೂಪುರೇಷೆಗಳನ್ನು ಪೌರಾಣಿಕ ಕಥಾವಸ್ತುವಿನಿಂದ ಪ್ರತ್ಯೇಕಿಸಲಾಗದಂತೆ ಸಾಮ್ಯತೆಯನ್ನು ಹೊಂದಿ ಅವುಗಳಲ್ಲಿ ಬೆರೆತು ಹೋಗಿವೆ. ಮೊದಮೊದಲು ಹುಟ್ಟಿದ ಸ್ವತಂತ್ರ ನಾಟಕಗಳಲ್ಲಿ ಪೌರಾಣಿಕ ವಸ್ತುಗಳ ಹಿನ್ನೆಲೆಯಲ್ಲಿಯೇ ಬಂದವುಗಳಾಗಿವೆ.

ಪೌರಾಣಿಕ ನಾಟಕಗಳಲ್ಲಿ ಬಾಹ್ಯ ಸತ್ಯತೆಗಿಂತಲೂ ಹಿರಿದಾದ ಭಾವಸತ್ಯ ಮುಖ್ಯವಾದುದು. ಅಂದರೆ ಆ ಪಾತ್ರಗಳ ಮೂಲಕ ಉದಾತ್ತತೆಯನ್ನು ಎತ್ತಿ ತೋರಿಸುವುದರಿಂದ ನೋಡುಗರ ಮನಸ್ಸಿಗೆ ಆದರ್ಶತ್ವದ ಕಲ್ಪನೆ ಮೂಡಿ ಬರುತ್ತದೆ. ಬಹುಮುಖ್ಯವಾಗಿ ಪುರಾಣದ ಕೆಲವೊಂದು ಪಾತ್ರಗಳು ಒಂದೊಂದು

ಮೌಲ್ಯದ ಪ್ರತೀಕಗಳಾಗಿ ತೋರುತ್ತವೆ. ಅಲ್ಲದೆ ಪುರಾಣಗಳ ಕೆಲವು ಪಾತ್ರಗಳನ್ನು ತಮ್ಮ ನಿಜ ಜೀವನದಲ್ಲಿ ಕಂಡ ವ್ಯಕ್ತಿಗಳೊಡನೆ ಹೋಲಿಸಲಾಗಿದೆ. ಪುರಾಣದ ಪಾತ್ರಗಳ ನಡವಳಿಕೆಯನ್ನು ವಿಮರ್ಶಿಸುವ ಪ್ರವೃತ್ತಿಯು ನಾಟಕ ಸಾಹಿತ್ಯದಲ್ಲೂ ಸಹ ಕಂಡುಬರುತ್ತದೆ. "ಭೂತ–ವರ್ತಮಾನಗಳ ನಡುವಣ ರೂಪು ತಳೆಯುವ ಪೌರಾಣಿಕ ನಾಟಕಗಳು ಸಮಕಾಲೀನ ಸಂದರ್ಭದ ಹೊಸ ಬೆಳವಣಿಗೆಯಾಗಿವೆ. ಹಾಗಾಗಿ ಇಲ್ಲಿ ಪೌರಾಣಿಕ ಘಟನೆ–ಪಾತ್ರ–ಪರಿಸರ–ವಿವರಗಳ ಪ್ರತಿಸೃಷ್ಟಿಯಾಗಲಿ ಅವುಗಳ ಸತ್ಯಾಸತ್ಯಗಳಾಗಲಿ ಅಷ್ಟು ಮಹತ್ವದಲ್ಲ. ಅವುಗಳ ಮೂಲಕ ಕಾಣಿಸಬಹುದಾದ ಜೀವನದ ಹೊಸ ಅರ್ಥ ಮುಖ್ಯವಾದದ್ದು."[2] ಇದರಿಂದ ಆಧುನಿಕ ಕಾಲದಲ್ಲಿ ಸಹ ಪುರಾಣಗಳ ಮಹತ್ವ ಅವುಗಳಲ್ಲಿ ಇರುವ ಲೋಕನೀತಿಯ ವ್ಯವಹಾರ, ಸಾಂಕೇತಿಕವಾದ ಪಾತ್ರಗಳು, ವಸ್ತು ಮುಂತಾದ ವಿಷಯದಿಂದ ಪುರಾಣ ಪ್ರಜ್ಞೆಯು ಸಮಕಾಲೀನ ಪರಿಸ್ಥಿತಿಗೆ ಪೂರಕವಾಗಿರುತ್ತದೆಂಬ ಸ್ಪಷ್ಟ ಚಿತ್ರಣ ಗೋಚರವಾಗುವುದು.

ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದವರೆಗಿನ ಕಾಲ ಪೌರಾಣಿಕ ವಸ್ತು ವಿಷಯ ಸಾಮಗ್ರಿಯ ಆಧಾರವುಳ್ಳ ಅಥವಾ ಪೌರಾಣಿಕ ದೃಷ್ಠಿಯ ರೂಪಾತ್ಮಕ ಸಾಹಿತ್ಯ. ಇದು ಕಳೆದ ನೂರು ವರ್ಷಗಳ ಕಾಲದ ಸಾಹಿತ್ಯ, ಪಾಶ್ಚಾತ್ಯ ಸಾಹಿತ್ಯ ಪ್ರಭಾವ ಹಾಗೂ ಮಾನವ ಸಾಂಸ್ಕೃತಿಕ ಮೌಲ್ಯಗಳ ಬಗೆಗಿನ ವಾಸ್ತವತೆಯ ಮೇಲೆ ಒತ್ತು ನೀಡಿದ ನವೀನ ದೃಷ್ಟಿಕಾಲ. ಈ ನಡುವಿನ ಕಾಲದಲ್ಲಿ ಪುರಾಣ ಬಗೆಗಿನ ಪರಿಕಲ್ಪನೆಗಳು ಬದಲಾಗುತ್ತಾ ಬಂದಿವೆ. ಆದರೆ, ಆಧುನಿಕ ಯುಗದಲ್ಲಿ ನಾಟಕವು ಪ್ರಾಮುಖ್ಯತೆಯನ್ನು ಪಡೆದುಕೊಂಡು ಮತ್ತೆ ಪೌರಾಣಿಕ ವಸ್ತುಗಳ ಹಿನ್ನೆಲೆಯಲ್ಲಿ ಇಂದಿನ ಕಾಲಕ್ಕೆ ಪ್ರದರ್ಶನಗೊಂಡವು. ಅಂದರೆ ಪುರಾಣದ ಕಾಲದ ಬದುಕಿಗೂ ವಾಸ್ತವಿಕತೆಯ ಜೀವನದ ನಿಲುವಿಗೂ ಇರುವ ಅಂತರ ಮತ್ತು ಪುರಾಣ ಪಾತ್ರಗಳ ಮೂಲಕ ಹೊಸ ಭಾವನೆಗಳನ್ನು ಮೂಡಿಸುವುದು ಅನೇಕ ನಾಟಕಕಾರರ ಮನೋಧರ್ಮವಾಗಿದೆ. ಆಧುನಿಕ ಪೌರಾಣಿಕ ನಾಟಕಗಳಂತೂ ಧರ್ಮ ಮತ್ತು ದೈವವನ್ನೂ ಕುರಿತು ಶ್ರದ್ಧೆ ನಂಬಿಕೆಗಳನ್ನು ವೈಚಾರಿಕ ಹಿನ್ನೆಲೆಯಲ್ಲಿಯೇ ಸ್ವೀಕರಿಸಲು ಪ್ರಯತ್ನಿಸಿವೆ. "ಪೌರಾಣಿಕ ವಸ್ತುಗಳನ್ನಾಶ್ರಯಿಸಿದ ಕನ್ನಡ ರಂಗಭೂಮಿಯಲ್ಲಿ ಬಯಲಾಟವು ಆರಾಧನೆಯ ಅಂಶಕ್ಕೆ ಮಹತ್ವ ಕೊಟ್ಟರೆ, ವೃತ್ತಿ ರಂಗಭೂಮಿಯ ನಾಟಕಗಳು ಧರ್ಮ ಮತ್ತು ನೀತಿ ಪ್ರತಿಪಾದನೆಗೆ ಆದ್ಯತೆ ಕೊಟ್ಟಿವೆ. ಆಧುನಿಕ ಪೌರಾಣಿಕ ನಾಟಕಗಳು ಪುರಾಣ ಕಥೆಗಳ ಧಾರ್ಮಿಕ ಹಿನ್ನೆಲೆ, ಸಾಮಾಜಿಕ ನಂಬಿಕೆ, ವ್ಯಕ್ತಿ ಸಂಬಂಧ ಮುಂತಾದವುಗಳನ್ನು ಸಾಂಕೇತಿಕವಾಗಿ ಸ್ವೀಕರಿಸಿ

ಅವುಗಳನ್ನು ಗಂಭೀರ ಚಿಂತನೆಗೆ ಗುರಿಪಡಿಸಿವೆ"[3] ಎಂದು ಕೆ. ಮರುಳಸಿದ್ಧಪ್ಪವರು ವಿಶ್ಲೇಷಿಸುತ್ತಾರೆ.

ಪುರಾಣ ಕಥೆಗಳ ಮೂಲಕ ನೀತಿ ಪ್ರತಿಪಾದನೆಯನ್ನು ವ್ಯಕ್ತಪಡಿಸುವುದು ಈ ಪುರಾಣ ನಾಟಕಗಳ ಗುರಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪುರಾಣ ಕಥೆಯೊಂದರ ಪ್ರಮಾಣವೇ ಪುಣ್ಯದಾಯಕವೆಂಬ ನಮ್ಮ ಪರಂಪರೆಯಲ್ಲಿ ಪೌರಾಣಿಕ ನಾಟಕಗಳ ಪ್ರದರ್ಶನಕ್ಕೆ ಪ್ರೇಕ್ಷಕರಿಂದ ವಿಶೇಷ ಪ್ರೋತ್ಸಾಹ ಸಹಜವಾಗಿಯೇ ದೊರೆಯುತ್ತದೆ. ಇಲ್ಲಿ ನಾಟಕಕಾರರು ಸಹಿತ ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಅನೇಕ ನಾಟಕಗಳಲ್ಲಿ ಪುರಾಣ ಪ್ರಜ್ಞೆಯ ಚಿತ್ರಣವನ್ನು ಪ್ರತಿಬಿಂಬಿಸಿರುವುದು ಕಾಣಬಹುದಾಗಿದೆ.

ಮುಂದುವರೆದು ಒಂದು ಸಮುದಾಯದ ಸುಪ್ತ ಪ್ರಜ್ಞೆಯೊಳಗಿನ ಅನಂತ ಕಾಲದ ನೆನಪುಗಳು ಸೃಜನಶೀಲಗೊಂಡು ಅದ್ಭುತ ಕಲ್ಪನೆಯ ಕಥೆಗಳಾಗಿ ಅಥವಾ ನಾಟಕಗಳಾಗಿ ಹೊರಹೊಮ್ಮಿವೆ ಮತ್ತು ಅದರೊಳಗೆ ಸೃಷ್ಟಿಸಿದ ಜನರ ಬದುಕಿನ ನೆರಳಾಗಿವೆ. ಅಂದರೆ ನಾಟಕಕಾರರು ಹಲವು ತಂತ್ರಗಳನ್ನು ಅಳವಡಿಸಿಕೊಂಡು ಪುರಾಣ ವ್ಯಕ್ತಿಗಳ ಮೂಲಕ ನೈತಿಕತೆ, ಆದರ್ಶ, ಮೌಲ್ಯಗಳನ್ನು ಪ್ರತಿಪಾದಿಸಲು ಸಾಧ್ಯವಾಗಿವೆ. ಈ ಕಾರಣದಿಂದ ಕನ್ನಡ ನಾಟಕಗಳಲ್ಲಿ ಪುರಾಣಪ್ರಜ್ಞೆ ಯಾವ-ಯಾವ ಪಾತ್ರಗಳ ಮುಖಾಂತರ ತನ್ನ ಶ್ರೇಷ್ಠತೆಯನ್ನು ಸಾಧಿಸುತ್ತದೆ ಎಂದು ವಿಶ್ಲೇಷಿಸಬಹುದಾಗಿದೆ. ವಿಶೇಷವಾಗಿ ಆಧುನಿಕ ನಾಟಕಕಾರರು ಪುರಾಣದ ವಸ್ತುವನ್ನು ತೆಗೆದುಕೊಂಡರೆ ಅದರ ಮುಖಾಂತರ ಆಧುನಿಕ ವಸ್ತುವನ್ನು ಸಮೀಕರಣಗೊಳಿಸುತ್ತಾರೆ. ಇದರಿಂದ ನೋಡುಗರಿಗೆ ಒಂದು ಪಾತ್ರದ ಮನೋಧರ್ಮ ಅದರ ಹಿಂದೆ ಇರುವ ತಾತ್ಪರ್ಯ, ಸಂದೇಶಗಳ ವಿಷಯ ಮುಂತಾದವು ಹೊರಹೊಮ್ಮುತ್ತವೆ. ಈ ಕಾರಣದಿಂದ ಪುರಾಣದ ವಸ್ತುವಿನ ಹಿನ್ನೆಲೆಯಲ್ಲಿ ನಾಟಕ ರಚಿಸುವಾಗ ಆದರ್ಶ ವಿಚಾರಗಳನ್ನು ಪಡಿಮೂಡಿಸಬೇಕಾಗುತ್ತದೆ. ಪುರಾಣದ ಪ್ರಚಲಿತ ಆಕೃತಿಯನ್ನು ನಿರಾಕರಿಸುತ್ತಾ, ಅದೇ ಪುರಾಣವನ್ನು ಮತ್ತೊಂದು ಆಕೃತಿಯಲ್ಲಿ ಮತ್ತು ಉದ್ದೇಶದಲ್ಲಿ ಅಳವಡಿಸಿಕೊಂಡಿರುವುದು ಸಾಮಾನ್ಯವಾಗಿದೆ. ಆ ಹಿನ್ನೆಲೆಯಲ್ಲಿ ಪುರಾಣದ ವಸ್ತುವನ್ನು ತನಗಿಷ್ಟ ಬಂದಂತೆ ಬಳಸಿಕೊಳ್ಳುವ ಸೃಜನಶೀಲ ನಾಟಕಕಾರನ ಸ್ವಾತಂತ್ರ್ಯ ಮಾತ್ರವಲ್ಲ, ಬದಲಿಗೆ ತಮ್ಮ ಕಾಲದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ನಾಟಕಕಾರನು ಮತ್ತೆ ಮತ್ತೆ ಸೃಜಿಸುವ ತಾತ್ವಿಕ ಪ್ರಯತ್ನವಾಗಿದೆ.

ಪ್ರಾರಂಭದ ದಿನಗಳಲ್ಲಿ ಪೌರಾಣಿಕ ವಸ್ತುವನ್ನು ಆಶ್ರಯಿಸಿದವರು ಶಾಂತಕವಿಗಳು, ನಂಜನಗೂಡು ಶ್ರೀಕಂಠಶಾಸ್ತ್ರಿಗಳು ಮತ್ತು ಎಂ. ಎಲ್.

ಶ್ರೀಕಂಠೇಗೌಡರು. ಇವರು ವಿಶೇಷವಾಗಿ ಪುರಾಣ ಕೃತಿಯ ಪ್ರಸಂಗಗಳನ್ನು ಎತ್ತಿಕೊಂಡು ನಾಟಕಗಳನ್ನು ರಚಿಸಿದರು. ನವೋದಯದ ಪರಿಕಲ್ಪನೆ ಇಲ್ಲಿ ಸ್ಪಷ್ಟವಾಗಿ ಕಂಡರೂ ಪುರಾಣದ ಪಾತ್ರಗಳನ್ನು, ಉದಾತ್ತೀಕರಿಸಿದರು. ಶ್ರೀಕಂಠಶಾಸ್ತ್ರಿಗಳು ರಾಮಾಯಣದಿಂದ 'ಸೀತಾಪರಿಣಯ', 'ಸೀತಾ-ಸ್ವರ್ಣಮೃಗ', 'ಅಭಿಜ್ಞಾನಪ್ರಧಾನ', ಮಹಾಭಾರತದಿಂದ 'ವಿಜಯಾಭ್ಯುದಯ', 'ರಾಜಸೂಯಾಗ' ಇತ್ಯಾದಿ ಅಲ್ಲದೆ ವಿಷ್ಣುಪುರಾಣದಿಂದ 'ವಿಷ್ಣುಲೀಲೆ', 'ಧ್ರುವವಿಜಯ' ಮುಂತಾದ ನಾಟಕಗಳನ್ನು ಬರೆದರು. ಮೂಲಕಥೆಯ ಆಶ್ರಯದಲ್ಲಿ ಆಧುನಿಕತೆಯ ವಿಷಯವನ್ನು ಸೇರಿಸಿಕೊಂಡರು. ಇದರಿಂದ ಪ್ರತಿಯೊಂದು ನಾಟಕದ ಪಾತ್ರಗಳು ಮಾಸದ ಮಹಾಸತ್ಯವನ್ನು ತಮ್ಮ ಗರ್ಭದಲ್ಲಿ ಧರಿಸಿಕೊಂಡಿವೆ. "ಶ್ರೀಕಂಠಶಾಸ್ತ್ರಿಗಳ ನಾಟಕಗಳಲ್ಲಿ ನೀತಿ ಪ್ರತಿಪಾದನೆಗೆ ಅಗ್ರಪಟ್ಟ. ಅವರ ನಾಟಕ ಪಾತ್ರಗಳೆಲ್ಲವೂ ಆಯಾ ಸಂದರ್ಭಕ್ಕನುಸಾರವಾಗಿ ಕೆಲವು ನೀತಿ ವಾಕ್ಯಗಳನ್ನಾಡದೆ ಇರುವುದಿಲ್ಲ"[4] ಇದರಿಂದ ಶಾಸ್ತ್ರಿಗಳು ಪುರಾಣ ಪ್ರಜ್ಞೆಯನ್ನು ತಮ್ಮ ಎಲ್ಲಾ ನಾಟಕಗಳಲ್ಲಿ ಅಳವಡಿಸಿಕೊಂಡಿರುವುದನ್ನು ಸ್ಪಷ್ಟವಾಗಿ ನೋಡಬಹುದಾಗಿದೆ. ಕನ್ನಡ ನಾಟಕಗಳಲ್ಲಿ ಪುರಾಣ ಪ್ರಜ್ಞೆಯ ಚಿತ್ರಣದಿಂದ ವಾಸ್ತವಿಕತೆ ಮತ್ತು ಸಂಪ್ರದಾಯದ ನಿಲುವನ್ನು ಪ್ರತಿನಿಧಿಸುವ ಅಂಶ ಬೆಳಕಿಗೆ ಬರುತ್ತದೆ. ಅದರಲ್ಲಿ ಕೆಲವು ಶಾಶ್ವತವಾದ ಮಾನವ ಸ್ವಭಾವಗಳಿಗೆ ಪ್ರತೀಕವಾಗಿವೆ. ಸಮಾಜದಲ್ಲಿನ ಅನೇಕ ಏರುಪೇರು, ಮೇಲು-ಕೀಳುಗಳು ಮುಂತಾದ ನೂರೆಂಟು ವಿಷಯವನ್ನು ನಾಟಕ ರೂಪದಲ್ಲಿ ಹೊರಹೊಮ್ಮಿಸುವಾಗ ಸಂಪ್ರದಾಯಿಕವಾದ ವಿಚಾರಗಳು ಮೇಳೈಸುತ್ತವೆ.

ಮೇಲಿನ ಎಲ್ಲಾ ವಿಷಯಕ್ಕೆ ಪೂರಕವಾಗುವಂತೆ ನಾಟಕ ಸಾಹಿತ್ಯದಲ್ಲಿ ಪುರಾಣಪ್ರಜ್ಞೆಯು ಸಮೀಕರಿಸುವುದಾದರೆ ಪುರಾಣ ಪಾತ್ರಗಳ ಹಿನ್ನೆಲೆಯಲ್ಲಿ ಉತ್ತರ ಹುಡುಕುವುದು ಸಮಂಜಸವಾಗುತ್ತದೆ. ಹಾಗಾಗಿಯೇ ಪುರಾಣ ವ್ಯಕ್ತಿಗಳು ಒಂದೊಂದು ಮೌಲ್ಯಕ್ಕೆ ಕ್ರಿಯೆಯ ಅನ್ವರ್ಥಕ್ಕೆ ಸಾಕ್ಷಿಯಾಗುತ್ತಾರೆ ಎಂಬುದನ್ನು ನಾಟಕಕಾರರ ದೃಷ್ಟಿಯಿಂದಲೇ ಅರ್ಥೈಸಬಹುದಾಗಿದೆ.

**ಪುರುಷ ಕೇಂದ್ರಿತ ನೆಲೆಯಲ್ಲಿ ಪುರಾಣ ಪ್ರಜ್ಞೆ:**

ಸಾಹಿತ್ಯವು ಹಲವು ಪ್ರಕಾರದಲ್ಲಿ ಕಂಡರೂ ದೃಶ್ಯ ಮತ್ತು ಶ್ರವ್ಯದ ಮೂಲಕ ನಾಟಕವು ಬೆಳೆದು ಬಂದಿತು. ಇದರ ಹಿನ್ನೆಲೆಯಲ್ಲಿ ನವೋದಯ, ನವ್ಯ, ಪ್ರಗತಿಶೀಲ, ದಲಿತ-ಬಂಡಾಯ ಸಾಹಿತ್ಯದ ನಾಟಕಕಾರರು ತಮ್ಮದೇ ಆದ ಧೋರಣೆಯ ಮೂಲಕ ಪುರಾಣದ ಪಾತ್ರಗಳನ್ನು ಹೊಸ ಸೃಷ್ಟಿಯ ನವ ಸಂದೇಶವನ್ನು ಬಿತ್ತಲು ಮುಂದಾದರು. ಅದರಿಂದ ಹಿಂದಿನ ಉದಾತ್ತ ಪಾತ್ರಗಳು ಮತ್ತು ಅಲಕ್ಷಿತ

ಪಾತ್ರಗಳನ್ನು ಎತ್ತಿಕೊಂಡು ಆಧುನಿಕ ಜಗತ್ತಿಗೆ ಪುರಾಣದ ಪ್ರಜ್ಞೆಯ ಪರಿಕಲ್ಪನೆಯನ್ನು ಪರಿಚಯಿಸಿದರು. ಹಾಗಾಗಿಯೇ ಉದಾತ್ತ ಧ್ಯೆಯಗಳಿಗಾಗಿ ಅವರು ನಡೆಸಿದ ತ್ಯಾಗಜೀವನ, ಬದುಕಿನ ಹೋರಾಟ, ಸಾಮಾಜಿಕ ತಾರತಮ್ಯ, ಪಾವಿತ್ರತೆ, ಶೋಷಣೆ, ಅಧಿಕಾರ ಮುಂತಾದ ವಿಷಯಗಳನ್ನು ಈ ಪಾತ್ರದ ಮೂಲಕ ಆಧುನಿಕರಲ್ಲಿ ಅರಿವು ಮೂಡಿಸುವುದಕ್ಕೆ ಪುರಾಣದ ವಸ್ತುವನ್ನು ಆಯ್ಕೆಮಾಡಿಕೊಂಡರು. ವಿಶೇಷವಾಗಿ ಪೌರಾಣಿಕ ನಾಟಕಗಳಲ್ಲಿ ಪುರುಷ ಕೇಂದ್ರಿತ ನೆಲೆಯಲ್ಲಿ ಪುರಾಣಪ್ರಜ್ಞೆಯನ್ನು ಚಿತ್ರಿಸುವುದಾದರೆ ಪ್ರತಿಯೊಬ್ಬ ನಾಟಕಕಾರರು ಒಬ್ಬೊಬ್ಬ ವ್ಯಕ್ತಿಯ ಶ್ರೇಷ್ಠತೆಯ ನೆಲೆಯಲ್ಲಿ ನಾಟಕಗಳನ್ನು ರಚಿಸಿದರು. ಇಲ್ಲಿ ಅರ್ಜುನ, ಭೀಮ, ಧರ್ಮರಾಯ, ರಾಮ, ಸೀತೆ, ಸಾವಿತ್ರಿ, ಕರ್ಣ, ದುರ್ಯೋಧನ, ಭೀಷ್ಮ, ವಶಿಷ್ಠ, ವಿಶ್ವಾಮಿತ್ರ, ಯಯಾತಿ, ಶ್ರೀಕೃಷ್ಣ, ರಾವಣ, ಜಮದಗ್ನಿ, ಹರಿಶ್ಚಂದ್ರ ಮುಂತಾದ ಪಾತ್ರಗಳು ಒಂದೊಂದು ಮೌಲ್ಯಗಳನ್ನು ಪ್ರತಿನಿಧಿಸುವ ಪಾತ್ರಗಳಾದವು. ಆದರೆ ಇವುಗಳನ್ನು ಬಿಟ್ಟು ಪೋಷಕ ಪಾತ್ರಗಳನ್ನು, ಬಂಡಾಯದ ಪಾತ್ರಗಳನ್ನು, ಕೆಳವರ್ಗದ ಪಾತ್ರಗಳನ್ನು, ಚಿಕ್ಕ ಚಿಕ್ಕ ಪಾತ್ರಗಳನ್ನು ಅಂದಿನ ಕಾಲದ ಕವಿಗಳು ಚಿತ್ರಿಸಲಿಲ್ಲ. ಬದಲಿಗೆ ಆಧುನಿಕ ಕಾಲದ ನಾಟಕಕಾರರು ಇಂತಹ ಪಾತ್ರಗಳನ್ನೇ ಮೇಲಕ್ಕೆ ಎತ್ತಿ ಅವರ ಮೌಲ್ಯಗಳನ್ನು ಪ್ರತಿನಿಧಿಸಿದರು. ಅಂತಹ ಪಾತ್ರಗಳಲ್ಲಿ 'ಏಕಲವ್ಯ'ನು ಒಬ್ಬ. ಅವನನ್ನು ಕುರಿತ ಹಲವಾರು ನಾಟಕಗಳು ಬಂದಿವೆ. ಇಲ್ಲಿ ಏಕಲವ್ಯನ ನಿಷ್ಠೆ, ಗುರುಭಕ್ತಿ, ಧೈರ್ಯ, ಕಾಡುಸಂಸ್ಕೃತಿ, ಸಂಘರ್ಷ, ಸೋಲು–ಸವಾಲು, ಸಾಂಸ್ಕೃತಿಕ ಬದುಕಿನ ಮುಂತಾದ ವಿಷಯಗಳು ಆಧುನಿಕರ ಹಿನ್ನೆಲೆಯಲ್ಲಿ ಮೂಡಿಬಂದಿವೆ.

ಒಟ್ಟಿನಲ್ಲಿ ಪೌರಾಣಿಕ ಸಾಮಗ್ರಿಗಳನ್ನು ನಾಟಕಕಾರ ಆರಿಸಿಕೊಂಡಾಗ ನಾಟಕದ ಕ್ರಿಯೆಯ ರೂಪ ನಿಶ್ಚಿತವಾಗಿರುತ್ತದೆ. ಅಲ್ಲದೆ, ಪಾತ್ರಗಳ ಘನತೆ, ಸ್ವಭಾವ ಇವನ್ನು ಕುರಿತ ಪ್ರೇಕ್ಷಕರ ಮನಸ್ಸಿನಲ್ಲಿ ಕೆಲವು ಕಲ್ಪನೆಗಳು ಬೇರೂರಿರುತ್ತವೆ. ಅಲ್ಲದೆ, ಆಧುನಿಕರಲ್ಲಿ ಪುರಾಣ ಪ್ರಜ್ಞೆಯು ಹೇಗೆ ಕಾಣಿಸುತ್ತದೆ ಎಂಬುದಕ್ಕೆ ಉದಾಹರಣೆ ಎಂದರೆ ಈ ಲೋಕದಲ್ಲಿ ಸಜ್ಜನರಿಗೆ, ಒಳ್ಳೆಯದನ್ನು ಮಾಡಿದವರಿಗೆ, ತ್ಯಾಗ, ಬಲಿದಾನ, ಪ್ರೀತಿ, ವಾತ್ಸಲ್ಯ, ಗೌರವ, ನಿಷ್ಠೆ ಮುಂತಾದ ಮೌಲ್ಯಗಳನ್ನು ಪ್ರತಿನಿಧಿಸುವ ಪಾತ್ರಗಳಿಗೆ ದೈವಕೃಪೆ ಇದ್ದೇ ಇರುತ್ತದೆ ಎಂಬುದಕ್ಕೆ ಸಾಕ್ಷಿ. ಹರಿಶ್ಚಂದ್ರನ ಸತ್ಯ, ಕರ್ಣನ ತ್ಯಾಗ, ಭೀಷ್ಮಾಚಾರ್ಯರ ಮಮಕಾರ, ಏಕಲವ್ಯನ ಗುರುಭಕ್ತಿ, ಸಾವಿತ್ರಿಯ ಪತಿಪ್ರೀತಿ, ಸೀತೆಯ ಕಷ್ಟ, ದ್ರೌಪದಿಯ ತೊಂದರೆ ಇಲ್ಲಿ ಚಿತ್ರಣಗೊಂಡಿದೆ. ಜೊತೆಗೆ ಅಧಿಕಾರ, ಮೋಸ, ಅಹಂಕಾರ, ದೌರ್ಜನ್ಯ, ಭಾವನೆಗೆ ಶಿಕ್ಷೆ ಇದ್ದೇ ಇರುತ್ತದೆ ಎಂಬುದಕ್ಕೆ ದುರ್ಯೋಧನ, ದುಶ್ಯಾಸನ, ರಾವಣ ಮುಂತಾದ

ಪಾತ್ರಗಳು ಪ್ರತೀಕವಾಗಿವೆಯೆಂಬುದನ್ನು ಆಧುನಿಕರಿಗೆ ತಿಳಿಸಲು ಪುರಾಣಗಳು ಸಹಾಯವಾಗಿವೆ. ಕನ್ನಡ ನಾಟಕಗಳಲ್ಲಿ ಪುರಾಣ ಪ್ರಜ್ಞೆಯ ಚಿತ್ರದಿಂದ ವಾಸ್ತವಿಕತೆ ಮತ್ತು ಸಂಪ್ರದಾಯದ ನಿಲುವನ್ನು ಪ್ರತಿನಿಧಿಸುವ ಅಂಶ ಬೆಳಕಿಗೆ ಬರುತ್ತದೆ. ತತ್ಪರಿಣಾಮವಾಗಿ ತನ್ನ ವಿವಿಧ ರೀತಿಯ ಶೈಲಿ ಧೋರಣೆಗಳ ಮುಖಾಂತರ ಸಮಾಜದ ಪರಿಸ್ಥಿತಿಯನ್ನು ಚಿತ್ರಿಸುವಲ್ಲಿ ಈ ನಾಟಕ ಸಾಹಿತ್ಯವು ಮಹತ್ವದ ಪಾತ್ರವಹಿಸುತ್ತದೆ. ಮೇಲಿನ ಎಲ್ಲಾ ವಿಷಯಕ್ಕೆ ಪೂರಕವಾಗಿ ಕೆಲವು ಪಾತ್ರಗಳನ್ನು ವಿಶ್ಲೇಷಿಸುವುದಾದರೆ ಹಲವು ನಾಟಕಕಾರರು ಒಂದೇ ಪಾತ್ರದ ವ್ಯಕ್ತಿಯನ್ನು ವಿಭಿನ್ನ ರೀತಿಯಲ್ಲಿ ಚಿತ್ರಿಸುವುದು ಕಂಡುಬರುತ್ತದೆ.

**ಹರಿಶ್ಚಂದ್ರ:**

ಈ ಪಾತ್ರದ ಬಗ್ಗೆ ಅನೇಕ ನಾಟಕಕಾರರು ತಮ್ಮದೇಯಾದ ನೆಲೆಯಲ್ಲಿ ಬರೆದರು ಸಹಿತ ಕೊನೆಗೆ ಹರಿಶ್ಚಂದ್ರನನ್ನು ಸತ್ಯವಂತನನ್ನಾಗಿ ಮಾಡಿದ ವಸ್ತುವನ್ನು ಆಯ್ದುಕೊಂಡಿದ್ದಾರೆ. ಹಾಗೆ ನೋಡಿದರೆ ಜಿ. ಜಿ. ಹೆಗಡೆಯವರ 'ರಾಜಾಹರಿಶ್ಚಂದ್ರ' ನಾಟಕದಲ್ಲಿ ವಾಮನ, ಭಾಗವತ, ಕೂರ್ಮಪುರಾಣಗಳಲ್ಲಿರುವ ಹರಿಶ್ಚಂದ್ರ ಕಥೆಯಿದೆ. ಬಿ. ನಂಜುಂಡಪ್ಪನವರ ರಾಘವಾಂಕನ 'ಹರಿಶ್ಚಂದ್ರರೂಪಕಂ', ಬ. ಪ. ನಾಯ್ಕರವರ 'ಸತ್ವ ಪರೀಕ್ಷೆ', ಆರ್. ಸಿ. ಹಿರೇಮಠರ 'ಹರಿಶ್ಚಂದ್ರನಾಟಕಂ', ಎಸ್. ವಿ. ರಂಗಣ್ಣರವರ 'ಹರಿಶ್ಚಂದ್ರ, ಪು. ತಿ. ನರಸಿಂಹಾಚಾರರ 'ಸತ್ಯಾಯನ ಹರಿಶ್ಚಂದ್ರ' ಈ ನಾಟಕಗಳಲ್ಲಿ ಹರಿಶ್ಚಂದ್ರನಿಗೆ ಸಂಬಂಧಿಸಿದ ಕಥೆಯಿದೆ. ಆದರೆ ಇವೆಲ್ಲವಗಳನ್ನು ನೋಡಿದಾಗ ಪುರಾಣದ ಪಾತ್ರವನ್ನೇ ಅನೇಕರು ಬೇರೆ ಬೇರೆ ರೀತಿಯಲ್ಲಿ ಹೇಳಿದ್ದಾರೆ. ಇದರಿಂದ ಪುರಾಣದ ವಿಷಯವನ್ನು ಆಧುನಿಕ ಜಗತ್ತಿಗೂ ಸಹಿತ ಪರಿಚಯಿಸಿ, ಪುರಾಣದ ಮೌಲ್ಯವನ್ನು ಉದಾತ್ತೀಕರಿಸಿದರು. ಆದರೆ "ಪು.ತಿ.ನ. ಅವರು 'ಸತ್ಯಾಯನ ಹರಿಶ್ಚಂದ್ರ' ನಾಟಕವು ಮೇಲಿನ ನಾಟಕಗಳಿಗಿಂತ ಭಿನ್ನವಾಗಿ ನಿಂತಿದೆ. ಈ ನಾಟಕದಲ್ಲಿ ಹರಿಶ್ಚಂದ್ರನು ಸ್ಮಶಾನ ಕಾಯುವ ಸನ್ನಿವೇಶದಿಂದ ಮೊದಲುಗೊಂಡು ಅವನಿಗೆ ರಾಜ್ಯಪ್ರಾಪ್ತಿಯಾಗುವವರೆಗಿನ ಒಂದೆರಡು ಕಥಾಘಟನೆಗಳನ್ನು ವಿವರಿಸಲಾಗಿದೆ."[5] ಈ ನಾಟಕಕಾರರು 'ಹರನೆಂಬುದೆ ಸತ್ಯ. ಸತ್ಯವೆಂಬುದೇ ಹರ' ಎಂಬ ತತ್ವವನ್ನು ಪ್ರತಿಪಾದಿಸಿರುವರು.

**ಕರ್ಣ:**

ಕಂದಗಲ್ಲ ಹನಮಂತರಾಯರ 'ದೈವ ದುರಂತ ಕರ್ಣ' ಎಂಬ ನಾಟಕದಲ್ಲಿ ಕರ್ಣನ ಜೀವನದ ಘಟನೆಗಳ ಪ್ರಸ್ತಾಪವಿದೆ. ಇಲ್ಲಿಯೂ ಸಹಿತ ಪುರಾಣದ

ಪಾತ್ರವನ್ನೇ ಕೇಂದ್ರವಾಗಿಟ್ಟುಕೊಂಡರೂ ಆಧುನಿಕತೆಯ ಹಿನ್ನೆಲೆಯಲ್ಲಿ ಚಿತ್ರಿತವಾಗಿದೆ. ಕುಂತಿದೇವಿಯ ಲೋಕಾಪವಾದಕ್ಕೆ ಹೆದರಿ ದುರ್ವಾಸರ ಕೃಪೆಯಿಂದ ಪಡೆದ ಮಗುವನ್ನು ಗಂಗೆಯಲ್ಲಿ ಬಿಸಾಕಿದಳು. ನಂತರ ಈ ಮಗುವೆ ರಾಧೇಯನಾಗಿ ಬೆಳೆದನು."[6] ಬಿ. ವಾಸುದೇವಾಚಾರ್ಯರ 'ಕಾಂತೇಯ ಕರ್ಣ', ಕೃಷ್ಣಮೂರ್ತಿ ಪುರಾಣಿಕರ 'ರಾಧೇಯ', ರಾ. ಸು. ಮಣಿಯವರ 'ಕರ್ಣ' ಮತ್ತು ಅನಕೃ ಅವರ 'ಸೂತಪುತ್ರ ಕರ್ಣ' ಈ ಎಲ್ಲಾ ನಾಟಕಗಳು ಕರ್ಣನ ಜೀವನ ವೃತ್ತಾಂತವನ್ನು ಪ್ರತಿನಿಧಿಸುತ್ತವೆ. ಆದರೆ ಕರ್ಣನ ತ್ಯಾಗ, ದುರ್ಯೋಧನ–ಕರ್ಣನ ಸ್ನೇಹ ಅಲ್ಲದೆ ಕರ್ಣನ ಸಾವು ಇವೆಲ್ಲ ಆಧುನಿಕ ಜೀವನಕ್ಕೆ ಹತ್ತಿರವೇ ಎಂದು ತಲಸ್ಪರ್ಶಿಯಾಗಿ ವಿವರಿಸುವುದು ಅಗತ್ಯವಾಗಿದೆ.

**ಯಯಾತಿ:**

ವಾಸ್ತವಿಕತೆ ಮತ್ತು ಪುರಾಣದ ವಸ್ತುವಿಗೆ ತಳಕು ಹಾಕಿ ನೋಡುವಾಗ ನೈಜತೆ ಮತ್ತು ಕಾಲ್ಪನಿಕತೆಯ ಅರಿವು ತಿಳಿಯುತ್ತದೆ. ಇದರಿಂದಾಗಿ ದ್ವಂದ್ವತೆ ಆಧುನಿಕರನ್ನು ಬಿಟ್ಟಿಲ್ಲ ಎಂಬುದಕ್ಕೆ ಯಯಾತಿ ಪಾತ್ರವೂ ಒಂದು. ಇದರ ಜೊತೆಗೆ ಸಹಪಾತ್ರಗಳು ಬರುತ್ತವೆಯಾದರೂ ಅನುಕರಿಸಿದ ರೀತಿ ಬೇರೆಯಾದದ್ದು. ಶ್ರೀರಂಗರ 'ಸಂಜೀವಿನಿ' ಮತ್ತು ಗಿರೀಶ್ ಕಾರ್ನಾಡರ 'ಯಯಾತಿ' ನಾಟಕಗಳಲ್ಲಿ ಯಯಾತಿ, ದೇವಯಾನಿ, ಶರ್ಮಿಷ್ಠೆ ಇವರನ್ನು ಕುರಿತ ಕಥೆಗಳಿವೆ. ಯಯಾತಿಯ ಮೂಲಕಥೆಯನ್ನು ಇಬ್ಬರೂ ನಾಟಕಕಾರರಿಗೆ ಪೌರಾಣಿಕ ವಸ್ತುವೇ ತಳಹದಿಯಾಗಿದ್ದರೂ, ಅವರು ಹಲವಾರು ಬದಲಾವಣೆಗಳನ್ನು ಮಾಡಿಕೊಂಡಿರುವರು. ಈ ಸ್ವರೂಪವನ್ನು ನಾಟಕಕಾರರು ಹೊಸದಾಗಿ ಸೃಷ್ಟಿಸಿಕೊಂಡ ಪಾತ್ರಗಳಲ್ಲಿ ಮೂಲವಸ್ತುವಿನ ಮಾರ್ಪಾಟಿನಲ್ಲಿಯೂ ಅವರು ಸಾಧಿಸಿದ ಹೊಸತನವನ್ನು ಗುರುತಿಸಲು ಸಾಧ್ಯ. ಅಂದರೆ "ಕಾರ್ನಾಡರ ಯಯಾತಿಯು ಸಾಮಾನ್ಯ ಮನುಷ್ಯನ ಮನೋವ್ಯಾಪಾರಗಳನ್ನು ಪ್ರತಿನಿಧಿಸುವನು. ಶ್ರೀರಂಗರ ಸಂಜೀವಿನಿಯಲ್ಲಿ ಕಚ ಮತ್ತು ದೇವಯಾನಿಯರ ಸಂಭಾಷಣೆಯಲ್ಲಿ ಪ್ರಕೃತಿ ಮತ್ತು ಪುರುಷ ಶಕ್ತಿಗಳ ತಿಕ್ಕಾಟವಿದೆ."[7] ಪ್ರಸ್ತುತ ಎರಡೂ ನಾಟಕಗಳ ಪ್ರತಿಯೊಂದು ಪಾತ್ರಗಳೂ ಭಾವನೆಗಳ ವಿರುದ್ಧ ದೆಸೆಯಲ್ಲಿದ್ದಂತಿವೆ. ಅಂತಹ ವಾತಾವರಣ ಮೂಲ ಕಥೆಯಲ್ಲಿ ಇದ್ದಂತೆಯೇ ನಾಟಕಗಳಲ್ಲಿ ಪ್ರಾಪ್ತವಾಗಿದೆ. ಇದರಿಂದ ಪುರಾಣಪ್ರಜ್ಞೆಯು ಆಧುನಿಕರ ಮನೋಸ್ಥಿತಿಯಲ್ಲಿ ಪಡಮೂಡಿದೆ ಎಂದು ತಿಳಿಯಬಹುದಾಗಿದೆ. ಪುರಾಣವಸ್ತುವನ್ನು ಆಶ್ರಯಿಸಿ ಆಧುನಿಕ ಅನೇಕ ನಾಟಕಗಳು ಬಂದಿವೆ ಎಂದು ತಿಳಿಯುವುದಾದರೆ ಹಿಂದಿನ ಕಾಲದ ಪಾತ್ರಗಳು ಸಾರ್ವತ್ರಿಕ ಮೌಲ್ಯಗಳನ್ನು ಪ್ರತಿಪಾದಿಸುತ್ತವೆ ಎಂಬುದು ಸ್ಪಷ್ಟ ನಿಲುವಾಗಿದೆ. ಇಲ್ಲಿ

ಮಹಾಭಾರತದಲ್ಲಿ ಬರುವ ಧರ್ಮರಾಯ, ಭೀಮ, ಅರ್ಜುನ, ನಕುಲ, ವಿದುಷ್ಟರ, ದುರ್ಯೋಧನ, ದುಶ್ಯಾಸನ, ಕರ್ಣ, ಭೀಷ್ಮ, ದ್ರೋಣ ಮುಂತಾದವರು ಅಲ್ಲದೆ, ರಾಮಾಯಣದಲ್ಲಿ ಬರುವ ರಾಮ, ಲಕ್ಷ್ಮಣ, ರಾವಣ, ಹನುಮಂತ ಮುಂತಾದ ಪಾತ್ರಗಳು ಒಂದೊಂದು ಮೌಲ್ಯದ ಪ್ರತೀಕವಾಗಿ ಪ್ರತಿನಿಧಿಸುತ್ತವೆ. ಇದರಿಂದ ಆಧುನಿಕರಲ್ಲಿ ಸಹ ಅದರ ಜಾಡಿನಲ್ಲಿಯೇ ಮುಂದುವರೆದರೂ ಅದು ಇಂದಿನ ಸಮಸ್ಯೆಗಳ ನಡುವೆ ಮುಖಾಮುಖಿಯಾಗುವ ಕಾರ್ಯ ನಡೆಯುತ್ತದೆ.

ಈ ಮೇಲಿನ ಸಂದರ್ಭವನ್ನು ಸಮರ್ಥಿಸುವುದಾದರೆ ಪಂಪನು ತನ್ನ ಭಾರತದ ಕೊನೆಯಲ್ಲಿ ಹೇಳಿದ ಮಾತೊಂದು ಹೀಗಿದೆ:

**"ಚಲದೋಳ್ ದುರ್ಯೋಧನಂ ನನ್ನಿಯೊಳಿನತದಯಂ ಗಂಡಿನೊಳ್ ಭೀಮಸೇನಂ**
**ಬಲದೋಳ್ ಮದ್ರೇಶನತ್ಯುನ್ನತಿಯೊಳಮರ ಸಿಂಧೂದ್ಭವಮಂ ಚಾಪವಿದ್ಯಾ**
**ಬಲದೋಳ್ ಕುಂಬೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್**
**ನಿರ್ಮಲಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ"**

ಈ ಪಂಕ್ತಿಯಿಂದ ಪ್ರತಿಯೊಬ್ಬರು ಒಂದೊಂದು ಮೌಲ್ಯಕ್ಕಾಗಿ ಪ್ರಸಿದ್ಧರಾಗಿದ್ದಾರೆಂದು ಅನ್ನಿಸುತ್ತದೆ. ಇದರಿಂದ ಇಂದಿಗೂ ಸಹಿತ ನಾಟಕ ಸಾಹಿತ್ಯದಲ್ಲಿ ಪುರಾಣ ಪಾತ್ರಗಳು ಜೀವಂತವಾಗಿವೆ ಎನ್ನಬಹುದು. ಇದಕ್ಕೆ ಪೂರಕವಾಗಿ ವಸ್ತುವನ್ನು ಆಯ್ಕೆಮಾಡಿಕೊಳ್ಳುವ ಸಂದರ್ಭದಲ್ಲಿ ಸಹಿತ ಹಳೆತು–ಹೊಸದರ ನಡುವೆ ನವೀನ ಸಂದೇಶವನ್ನು ಕೊಡುವ ಕಾರ್ಯ ಆಧುನಿಕ ಪೌರಾಣಿಕ ನಾಟಕಗಳಲ್ಲಿ ಕಂಡು ಬರಲು ಸಾಧ್ಯವಾಗಿದೆ.

## ಸ್ತ್ರೀ ಕೇಂದ್ರಿತ ನೆಲೆಯಲ್ಲಿ ಪುರಾಣ ಪ್ರಜ್ಞೆ:

ಪುರಾಣದ ಸ್ತ್ರೀ ಪಾತ್ರಗಳು ಪ್ರತಿಪಾದಿಸುವ ಮೌಲ್ಯ, ಆದರ್ಶ, ಸಂಕೇತ, ಉದಾತ್ತತೆಗಳಿಗೆ ನಿದರ್ಶನವೆಂಬಂತೆ ಯಮನ ಬೆನ್ನುಹತ್ತಿ ಪತಿಯ ಜೀವವನ್ನು ಮರು ಪಡೆದ ಸತ್ಯವಾನ್ ಸಾವಿತ್ರಿಯಾಗಲಿ, ಅಗಸನ ಮಾತು ಕೇಳಿ ರಾಮ ಕಾಡಿಗೆ ಕಳಿಸಿದ ಸೀತೆ, ಪತಿಭಕ್ತಿಯನ್ನು ಮೆರೆದ ಸತಿ ಅನಸೂಯಾ, ಶಾಪಗ್ರಹಸ್ಥಳಾದ ಅಹಲ್ಯೆ, ಊರ್ಮಿಳೆ, ಕುಂತಿ, ದ್ರೌಪದಿ, ರೇಣುಕೆ, ಮಾರಿ, ಶೂರ್ಪನಕಿ, ಪಾರ್ವತಿ, ದೇವಯಾನಿ ಮುಂತಾದ ಪಾತ್ರಗಳ ಮೂಲಕ ಅವರ ವ್ಯಕ್ತಿತ್ವವನ್ನು ಪರಿಚಯಿಸಿ ಆಧುನಿಕರು ಸಹಿತ ಸ್ತ್ರೀ ಪಾತ್ರದ ಗೌರವವನ್ನು ಉಳಿಸಿಕೊಂಡಿದ್ದಾರೆ. ಇದರಿಂದ ಈ ಎಲ್ಲಾ ಪಾತ್ರಗಳ ಮೂಲಕ ಪುರಾಣಪ್ರಜ್ಞೆ ಪಡೆಮೂಡಿರುವುದನ್ನು ನಿರೂಪಿಸಬಹುದಾಗಿದೆ.

**ದ್ರೌಪದಿ:**

ಪಂಚ ಪಾಂಡವರ ಹೆಂಡತಿಯಾದ ದ್ರೌಪದಿಯು ಇಂದಿನ ಕಾಲದ ಅನೇಕ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿದ್ದಾಳೆ. ಬಿ. ಪುಟ್ಟಸ್ವಾಮಯ್ಯನವರ 'ಯಜ್ಞಸೇನಿ' ಮತ್ತು ಕಂದಗಲ್ಲ ಹನುಮಂತರಾಯರ 'ಅಕ್ಷಯಾಂಬರ' ನಾಟಕಗಳಲ್ಲಿ ದ್ರೌಪದಿಯ ಕುರಿತು ಹೇಳುತ್ತಾ, ಇಲ್ಲಿ ಬಹುಮುಖ್ಯವಾಗಿ ಪುರಾಣದ ವಸ್ತುವನ್ನು ಆಧುನಿಕರಿಸಿ ಪುರಾಣದ ಅರಿವು ಮೂಡಿಸಲಾಗಿದೆ. ದ್ರೌಪದಿ ಮತ್ತು ಕೀಚಕರ ಸಂಬಂಧದ ಬಗ್ಗೆ ತಿಳಿಸುವ ಕೃಷ್ಣಮೂರ್ತಿ ಪುರಾಣಿಕರ 'ಸೈರಂಧ್ರಿ', ಕೈಲಾಸಂ ಅವರ 'ಕೀಚಕ', ಪರ್ವತವಾಣಿಯವರ 'ಕೀಚಕ', ಶಿವರಾಮ ಕಾರಂತರ 'ಕೀಚಕ–ಸೈರಂಧ್ರಿ' ನಾಟಕಗಳಲ್ಲಿ ಕೀಚಕನ ಮತ್ತು ದ್ರೌಪದಿಯ ಸಂಬಂಧ ಕುರಿತ ವಿಚಾರವಿದೆ. ಹಾಗೆ ನೋಡಿದರೆ ಈ ಎಲ್ಲಾ ನಾಟಕಗಳಲ್ಲಿ ದ್ರೌಪದಿಯೇ ಕಥೆಯ ಕೇಂದ್ರವ್ಯಕ್ತಿಯಾಗಿರುವಳು. ಒಟ್ಟು ಆಶಯದಲ್ಲಿ ಈ ನಾಟಕಗಳು ಸಾಂಪ್ರದಾಯಿಕವೆನಿಸಿದರೂ ಅವುಗಳಲ್ಲಿ ಪೌರಾಣಿಕ ವಸ್ತುವಿನ ಬದಲಾವಣೆ ಹಾಗೂ ಮೂಲಕಥಾ ಪಾತ್ರ ವ್ಯಕ್ತಿತ್ವಗಳ ಬದಲಾವಣೆಯಿಂದ ಹೊಸತನವನ್ನು ಗುರುತಿಸಲು ಸಾಧ್ಯವಾಗುತ್ತದೆ. ಇದನ್ನೆ ನಾವು ಪುರಾಣ ಪ್ರಜ್ಞೆಗೆ ಸಮರ್ಥಿಸಬಹುದಾಗಿರುತ್ತದೆ. ಇಲ್ಲಿ ಐದು ಗಂಡಂದಿರನ್ನು ಮದುವೆಯಾದ ದ್ರೌಪದಿ ಇಂದಿನ ಕಾಲಕ್ಕೆ ಅಸತ್ಯ ಎನಿಸಿದರೂ ಅವರ ಮೂಲಕ ಭಾವಸತ್ಯ ಹೊರಹಾಕಬಹುದಾಗಿರುತ್ತದೆ. ಅಲ್ಲದೆ ಕೃಷ್ಣನೇ ನನ್ನ ಮಾನ ಉಳಿಸಬಲ್ಲ ಎಂಬ ನಂಬಿಕೆ, ದುಶ್ಯಾಸನನ ದೌರ್ಜನ್ಯ, ತುಂಬಿದ ಸಭೆಯಲ್ಲಿ ಅಸಹಾಯಕರಾಗಿರುವ ತನ್ನ ಗಂಡಂದಿರು, ದ್ರೌಪದಿಯ ಪ್ರತಿಜ್ಞೆ, ಕೃಷ್ಣನ ಹಾರೈಕೆ ಇವುಗಳಿಂದ ದೈವತ್ವದ ಪರಿಕಲ್ಪನೆ ಗರಿ ಬಿಚ್ಚಿಕೊಳ್ಳುತ್ತವೆ. ಹಾಗಾಗಿ ಒಂದು ಪಾತ್ರವು ದೈವತ್ವ ಮೂಲಕ ಸಂದೇಶವನ್ನು ಕೊಡುವುದಕ್ಕೆ ಮುಂದಾಯಿತು.

**ಸಾವಿತ್ರಿ:**

ಯುಗಧರ್ಮದ ಹಿನ್ನೆಲೆಯಲ್ಲಿ ಸಾಹಿತ್ಯವು ಮರು ಸೃಷ್ಟಿಯಾಗುತ್ತದೆ ಎಂಬುವ ನಿಲುವು ಸತ್ಯವಾದುದು. ಅಂದರೆ ಹಿಂದಿನ ಕಾಲದ ಪುರಾಣ ಪಾತ್ರಗಳು ಇಂದಿನ ಕಾಲಕ್ಕೆ ಎದುರುಗೊಂಡು ಮಾತನಾಡುತ್ತವೆ. ಅಂತವುಗಳಲ್ಲಿ ಕೆ. ಎಸ್. ಬೈದೂರರ 'ಸತ್ಯವಾನ ಸಾವಿತ್ರಿ' ನಾಟಕದಲ್ಲಿ ರಾಮಾಯಣ, ಮಹಾಭಾರತದಲ್ಲಿರುವ ಸಾವಿತ್ರಿ ಕಥೆಯಿದೆ. ಪತಿಯ ಭಕ್ತಿ–ಪ್ರೇಮ–ನಿಷ್ಠೆ ಈ ಮೂರು ತಂತ್ರದ ಮೂಲಕ ಗಂಡನ ಜೀವವನ್ನು ಯಮಧರ್ಮನ ಬೆನ್ನುಹತ್ತಿ ಪತಿಯ ಅಸ್ತಿತ್ವದ ಅವಶ್ಯಕತೆಯನ್ನು ಅರುಹಿ, ಸತ್ಯವಾನನ ಪ್ರಾಣವನ್ನು ಮರಳಿ ಪಡೆದಳು. 'ಯಮನ ಸೋಲು' ನಾಟಕದಲ್ಲಿ ಸಾವಿತ್ರಿ ಮತ್ತು ಯಮರ ಸಂವಾದದಲ್ಲಿ ಕೇವಲ

ತರ್ಕವಿದೆ, ತಾತ್ವಿಕ ವಾಗ್ವಾದವಿದೆ. ಸಾವಿತ್ರಿಗೂ, ಯಮನಿಗೂ ವಾದ-ಸಂವಾದ ನಡೆದರೂ ಅವಳು ಪ್ರೇಮದ ನಿಷ್ಠೆಯೆದುರು ಯಮನ ಉಗ್ರ ವ್ರತ, ನಿಯಮ ಕರಗಿಹೋಗುವ ಪರಿಯನ್ನು ಪ್ರತಿಮಾ ನಿಷ್ಠವಾಗಿ ಕುವೆಂಪು ಚಿತ್ರಿಸಿದ್ದಾರೆ. ನಮ್ಮ ಪರಂಪರೆಯ ಪರಿಚಿತ ಪುರಾಣ ಕಥೆಗಳನ್ನು ಕಲಾತ್ಮಕವಾಗಿ ನಾಟಕ ರೂಪದಲ್ಲಿ ನಿರೂಪಿಸಿದ್ದಾರೆ."[8] ಮಾತಿನ ತೊಡಕಿನಲ್ಲಿ ಸಿಕ್ಕಿಕೊಂಡ ಯಮನು, ಸಾವಿತ್ರಿಗೆ ಸತ್ಯವಾನನನ್ನು ಬಿಟ್ಟುಕೊಡಬೇಕಾಯಿತೆಂಬ ಮೂಲ ಕಲ್ಪನೆಯನ್ನು ಮಾರ್ಪಡಿಸಿ, ಸಾವಿತ್ರಿಯ ನಿಶ್ಚಲವಾದ ಪ್ರೇಮವನ್ನು ಮೆಚ್ಚಿ ಮನಸಾರೆ ಹರಸಿದರೆಂಬ ಕಲ್ಪನೆ ಕುವೆಂಪು ಅವರದು. ಇಲ್ಲಿ "ಪತಿಯ ಅಸ್ತಿತ್ವ, ಪ್ರೇಮ ಇವೇ ಅವಳ ವಾದಕ್ಕೆ ಹಿನ್ನೆಲೆಯಾಗಿವೆ. ನೀತಿಪ್ರತಿಪಾದನೆಗೆ ಪ್ರತೀಕವಾದ ನಾಟಕ ಮಾಸ್ತಿಯವರ ಸಾವಿತ್ರಿ ಸಾವು ಸುತ್ತುವರಿದಿದ್ದೂ ಬದುಕುವ, ಬದುಕಿಸುವ ಮಾನವನ ಅದಮ್ಯ ಛಲವನ್ನು ಪ್ರತಿನಿಧಿಸುವ ಪುರಾಣ ಕಥೆಯಾದ ಸಾವಿತ್ರಿಯನ್ನು ನಾಟಕಕ್ಕೆ ಅಳವಡಿಸಿರುವ ನವೋದಯ ನಾಟಕಕಾರರಲ್ಲಿ ಬಹುಶಃ ಮಾಸ್ತಿಯವರೇ ಮೊದಲಿಗರು."[9] ಕೈಲಾಸಂ ಅವರ 'ಸೀಕರ್ಣೆ ಸಾವಿತ್ರಿ' ಏಕಪಾತ್ರ ರೂಪಕ ಪೌರಾಣಿಕ ಕಥೆಯ ಹಿನ್ನೆಲೆಯಲ್ಲಿ ಆಧುನಿಕ ಪತಿವ್ರತೆಯ ವಿಡಂಬನೆಯಿದೆ. ಈ ನಾಟಕದಲ್ಲಿ ನಾಲಿಗೆ ಚಪಲಕ್ಕೆ ಸಿಕ್ಕು ಪತಿಯ ಪ್ರಾಣಹರಣವಾದದ್ದನ್ನು ಪ್ರತಿನಿಧಿಸಿದೆ ಅಂದರೆ ಪರಂಪರಾಗತವಾಗಿ ನಂಬಿಕೊಂಡು ಬಂದ ಪೌರಾಣಿಕ ಮೌಲ್ಯಗಳು ಇಂದು ನಾಶವಾಗುತ್ತಿವೆ ಎಂಬ ಸಂಕೇತ ಈ ರೂಪಕದಲ್ಲಿದೆ. ಅಲ್ಲದೆ "ಶ್ರೀರಂಗರ ಸಾವಿತ್ರಿ ನಾಟಕದಲ್ಲಿ ಇದನ್ನು ಒಂದು ಆದರ್ಶದ ಪ್ರಣಯವೇ ಎಂದು ನಾನು ಚಿತ್ರಿಸಿದ್ದೇನೆ ಎಂದು ಶ್ರೀರಂಗರು ಹೇಳಿದ್ದಾರೆ."[10] ಹೀಗೆ ಆಧುನಿಕ ಮನೋಧರ್ಮದ ಹಿನ್ನೆಲೆಯಲ್ಲಿ ಪುರಾಣ ಪ್ರಜ್ಞೆಯು ನಿರೂಪಿತವಾಗಿದೆ ಎಂದು ತಿಳಿಯುತ್ತದೆ.

**ಸೀತೆ:**

ರಾಮಾಯಣದಲ್ಲಿ ಬರುವ ಕೇಂದ್ರ ಪಾತ್ರ ಸೀತೆಯದು, ಈ ಪಾತ್ರವು ಆಧುನಿಕ ಯುಗದ ಸ್ತ್ರೀಯರಿಗೆ ಮಾದರಿಯಂತೆ ಕಂಡುಬರುವುದು. ಅಂದರೆ ರಾಮಾಯಣದಲ್ಲಿ ಕಾಡು-ನಾಡು ಎರಡೂ ಸಂಸ್ಕೃತಿ ತಿಳಿದವಳು. ಅಗಸನ ಮಾತಿಗೆ ಮಾರುಹೋಗಿ ಹೆಂಡತಿಯನ್ನು ಕಾಡಿಗೆ ಕಳುಹಿಸಿದರೆ ರಾಮ-ಲಕ್ಷ್ಮಣರ ಜೊತೆ, ಋಷಿಮುನಿಗಳ ಕೂಡ ಬಾಳಿದ್ದು ಉಂಟು. ಇತ್ತ ಅರಮನೆಯಲ್ಲಿ ರಾಣಿಯಾಗಿ ಮೆರೆದಿದ್ದು ಉಂಟು. ಅಲ್ಲದೆ ಇಂದಿನ ಕಾಲಕ್ಕೆ ಸೀತೆ ಎಷ್ಟು ಮಹತ್ವ ಉಳ್ಳವಳು ಎಂಬುದು ಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಕುವೆಂಪು ಅವರ 'ವಾಲ್ಮೀಕಿಯ ಭಾಗ್ಯ' ಎಂಬ ನಾಟಕದಲ್ಲಿ ಸೀತಾಪರಿತ್ಯಾಗದ ಘಟನೆಯಿದೆ. ಅಂದಿನ ಕಾಲದ

ಯಾವುದೋ ಒಂದು ಮಾತಿಗೆ ಅದರ ಪರಿಣಾಮಕ್ಕೆ ಅವಳ ಪ್ರತಿಕ್ರಿಯೆ ಯಾವ ರೀತಿಯಾಗಿತ್ತು ಎಂಬುದಕ್ಕೆ ಅಧುನಿಕತೆಯಲ್ಲಿ ಸಹ ಈ ಪುರಾಣ ಪ್ರಜ್ಞೆಯು ಮುಂದುವರೆದಿರುವುದೇ ಎಂದು ನೋಡಬಹುದಾಗಿದೆ. ಈ ಎಲ್ಲಾ ಆಗು-ಹೋಗುಗಳ ಅಂಶಗಳಿಂದ ಅನಸೂಯೆ, ಊರ್ಮಿಳೆ, ಮಂಥರೆ, ಕೈಕೆ, ದೇವಯಾನಿ, ಉಷಾ, ಅಹಲ್ಯೆ, ಚಂದ್ರಮತಿ ಚಿತ್ರಿತಗೊಂಡಿರುವುದನ್ನು ಕಾಣಬಹುದಾಗಿದೆ.

ಒಟ್ಟಿನಲ್ಲಿ ಪುರಾಣಗಳನ್ನು ವಾಸ್ತವಿಕತೆಯ ಪರಂಪರೆಯ ನೆಲೆಯಲ್ಲಿ ಅಧ್ಯಯನ ಶೀಲ ತತ್ವದಲ್ಲಿ ಗಮನಿಸಿದಾಗ ನೈತಿಕ ವಿಚಾರ ಗೋಚರಿಸುತ್ತದಲ್ಲದೆ ಒಳಾಂತರಂಗದ ದರ್ಶನ ಸಾಧ್ಯವಾಗುತ್ತದೆ. ಕನ್ನಡ ಸಾಹಿತ್ಯ ನವೋದಯ, ನವ್ಯ, ಪ್ರಗತಿಶೀಲ, ದಲಿತ-ಬಂಡಾಯ ಮುಂತಾದ ಬದಲಾವಣೆಯ ಹಂತಗಳನ್ನು ದಾಟಿ ಬಂದರೂ ಕೂಡ ಪುರಾಣಗಳನ್ನು ನಿರಾಕರಿಸದೆ ಕಾಲಗತಿಗೆ ತಕ್ಕಂತೆ ಪುರಾಣ ಪ್ರತೀತಿಗಳನ್ನು ಉಳಿಸಿಕೊಂಡಿರುವುದು ಮಹತ್ವದ ಸಂಗತಿಯಾಗಿದೆ.

ಆಧುನಿಕ ಚಿಂತನೆಗೆ ಅನುಗುಣವಾಗಿ ನಿರ್ಲಕ್ಷಿತ ಸಮಾಜದ ನೆಲೆಯಿಂದ ಪುರಾಣಗಳನ್ನು ಪುನರ್‌ವಿಮರ್ಶಿಸುವ ಸಂಗತಿ ಬಹುಮುಖ್ಯವಾದುದು. ಹಿಂದಿನ ಕಾಲದಲ್ಲಿ ಮೇಲ್ವರ್ಗದವರು ಬರೆದ ಪುರಾಣಗಳಲ್ಲಿ ಕೆಳವರ್ಗದವರ ತೊಂದರೆ, ಪೋಷಕ ಪಾತ್ರಗಳ ಬಗ್ಗೆ ಕನಿಕರ ಆ ಕಾಲದ ಕವಿಗಳಲ್ಲಿ ಇರಲಿಲ್ಲ. ಬದಲಿಗೆ ಆಧುನಿಕರಲ್ಲಿ ಹೊಸ ಕಾಲಗತಿಯ ನವೀನ ಚಿಂತನಗೆ ಅನುಗುಣವಾಗಿ ಅಲ್ಲಿನ ಪಾತ್ರಗಳಿಗೆ ಹೊಸ ನೆಲೆಯನ್ನು ಶೋಧಿಸಿ ತೋರಿಸಬೇಕಾಯಿತು. ಈ ಹಂತದಲ್ಲಿ ಪ್ರಧಾನವಾಗಿ ಗೋಚರಿಸದೆ ಇದ್ದ ಬಹುತೇಕ ಪಾತ್ರಗಳು ನಾಯಕ ಪಟ್ಟವನ್ನು ಪಡೆದು ಮರುಸೃಷ್ಟಿಕಂಡವು. ಏಕಲವ್ಯನಂತಹ ಗುರುಭಕ್ತಿ, ನಿಷ್ಠೆ, ಧೈರ್ಯ, ಏಕಾಗ್ರತೆ, ತ್ಯಾಗ ಮುಂತಾದ ಗುಣಗಳನ್ನು ಹೊಂದಿರುವಂತವನನ್ನು ಅಂದಿನ ಕಾಲದ ಕವಿ ವರ್ಗದವರು ಸಾಮಾಜಿಕ, ರಾಜಕೀಯ ಮುಂತಾದ ಯಾವುದೋ ಕಾರಣಕ್ಕೆ ಮಹತ್ವ ಕೊಡಲಿಲ್ಲ. ಆದರೆ ಇಂದಿನ ಜನಸಾಮಾನ್ಯರಿಗೆ ಉದಾತ್ತ ವ್ಯಕ್ತಿಯಾಗಿ ದೀನ-ದಲಿತರ ಪ್ರತೀಕವಾಗಿ ಏಕಲವ್ಯ ಕಂಡು ಬರುತ್ತಾನೆ. ಶಂಭೂಕ, ವಾಲಿ, ಕರ್ಣ, ಅಹಲ್ಯೆ, ಸೀತೆ, ಮಂಥರೆ, ಅಶ್ವತ್ಥಾಮ, ಕೀಚಕ, ಸಾವಿತ್ರಿ, ಅನಸೂಯ, ಏಕಲವ್ಯ ಮುಂತಾದ ಪೋಷಕ ಪಾತ್ರಗಳು ಪ್ರಾಧಾನ್ಯತೆ ಪಡೆದುಕೊಂಡಿವೆ. ಅವುಗಳ ಮೂಲಕ ಆಧುನಿಕರಲ್ಲಿ ಪುರಾಣದ ಪರಿಕಲ್ಪನೆಯನ್ನು ಅರ್ಥೈಸುವ ಕೆಲಸವನ್ನು ನಾಟಕಕಾರರು ಮಾಡಿದ್ದಾರೆ. ಈ ದೃಷ್ಟಿಯಿಂದ ನಾಟಕಗಳಲ್ಲಿ ಪುರಾಣದ ವಸ್ತುವನ್ನು ಮತ್ತು ಸಮಕಾಲೀನ ಸವಾಲುಗಳನ್ನು ಎತ್ತಿ ತೋರಿಸಿ ಅದರ ಮಹತ್ವವನ್ನು ಅರ್ಥೈಸಬಹುದಾಗಿದೆ.

**ಅಡಿ ಟಿಪ್ಪಣಿಗಳು:**

1. ಕೆ. ಮರುಳಸಿದ್ದಪ್ಪ, ಆಧುನಿಕ ಕನ್ನಡ ನಾಟಕ, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2005, ಪು. 112.
2. ಗಿರಡ್ಡಿ ಗೋವಿಂದರಾಜ: ಸಮಗ್ರ ವಿಮರ್ಶೆ, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2001, ಪು. 386.
3. ಕೆ. ಮರುಳಸಿದ್ದಪ್ಪ, ಆಧುನಿಕ ಕನ್ನಡ ನಾಟಕ, ಪು. 114.
4. ಅದೇ, ಪು. 116.
5. ಕುಲಕರ್ಣಿ, ಆಧುನಿಕ ಕನ್ನಡ ನಾಟಕಗಳಲ್ಲಿ ಪೌರಾಣಿಕ ವಸ್ತು, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, 1981, ಪು. 24.
6. ಅದೇ, ಪು. 51.
7. ಅದೇ, ಪು. 162.
8. ಕೆ. ಮರುಳಸಿದ್ದಪ್ಪ, ಆಧುನಿಕ ಕನ್ನಡ ನಾಟಕ, ಪು. 134.
9. ಅದೇ, ಪು. 131.
10. ಕುಲಕರ್ಣಿ, ಆಧುನಿಕ ಕನ್ನಡ ನಾಟಕಗಳಲ್ಲಿ ಪೌರಾಣಿಕ ವಸ್ತು, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪು. 169.